## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಕೊಪ್ಪಳ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮತ್ತು ಅದರ ನಾಲ್ಕು ಉಪವಿಭಾಗಗಳಲ್ಲಿ ಉಗ್ರಾಣ ದಾಸ್ತಾನಿನ ಕೊರತೆ ಇಲಾಖಾ ವಿಚಾರಣೆ - ಶ್ರೀ ದೇವೇಂದ್ರಪ್ಪ ದೇಸಾಯಿ, ಹಿಂದಿನ ಪ್ರಥಮ ದರ್ಜೆ ಲೆಕ್ಕ ಸಹಾಯಕ ಇವರನ್ನು ಆರೋಪಗಳಿಂದ ಕೈ ಬಿಡುವ ಬಗ್ಗೆ ಆದೇಶ.

**ಓದಲಾಗಿದೆ:-**

1. ಸರ್ಕಾರದ ಕಾರಣ ಕೇಳುವ ನೋಟಿಸ್ ಸಂಖ್ಯೆ:ಗ್ರಾಅಪ 38 ಇಎನ್‌ಕ್ಯೂ 2004, ದಿ:28.10.2005
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 38 ಇಎನ್‌ಕ್ಯೂ 2004, ದಿನಾಂಕ:6.4.2006.
3. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 38 ಇಎನ್‌ಕ್ಯೂ 2004, ದಿ:18.4.2006.
4. ವಿಚಾರಣಾಧಿಕಾರಿಗಳ ವರದಿ ದಿನಾಂಕ:01.9.2007.
5. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 38 ಇಎನ್‌ಕ್ಯೂ 2004, ದಿನಾಂಕ:18.1.2008.
6. ವಿಚಾರಣಾಧಿಕಾರಿಗಳ ವರದಿ ದಿನಾಂಕ:12.3.2008.
7. ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪ 38 ಇಎನ್‌ಕ್ಯೂ 2004, ದಿನಾಂಕ:4/6-11-08.
8. ಅಧೀಕ್ಷಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಬಳ್ಳಾರಿ ಇವರ ಪತ್ರ ಸಂಖ್ಯೆ:ಅಅ/ಪಂರಾಇಂವೃ/ಬ/ಸಿ-1/ಇನ್‌ಕ್ಯೂರಿ/2008-09/660, ದಿನಾಂಕ:1.7.2009.
9. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 38 ಇಎನ್‌ಕ್ಯೂ 2004, ದಿನಾಂಕ:8.9.2009.
10. ಆದೇಶ ಸಂಖ್ಯೆ:ಗ್ರಾಅಪ 38 ಇಎನ್‌ಕ್ಯೂ 2004, ದಿನಾಂಕ;07.3.2012 ಮತ್ತು 29.8.2012.
11. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 38 ಇಎನ್‌ಕ್ಯೂ 2004, ದಿನಾಂಕ:5.10.2015
12. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 38 ಇಎನ್‌ಕ್ಯೂ 04, ದಿ:16.12.2015.
13. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ ಇವರ ಪತ್ರ ಸಂಖ್ಯೆ:ಜಿಪಂಕೊ/ಸಿಸಿಎ/ಸಿಆರ್-10/ಶಿಶಿಖ/04-05/2014-15, 5659, ದಿ:7.9.2016

-----***-----

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮಾಂಕ (2) ರ ಆದೇಶದಲ್ಲಿ ಕೊಪ್ಪಳ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮತ್ತು ಅದರ ನಾಲ್ಕು ಉಪವಿಭಾಗಗಳ ಉಗ್ರಾಣದ ದಾಸ್ತಾನಿನ ಕೊರತೆಯಿಂದಾಗಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಲು ಕಾರಣರಾದ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧ ಜಂಟಿ ಇಲಾಖಾ ವಿಚಾರಣೆ ಜರುಗಿಸಲು ಶ್ರೀ ಟಿ.ಜೆ. ಮರಿಯಪ್ಪ ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

1. ಕೆ.ಎನ್.ಚಂದ್ರಶೇಖರ್, ಅಂದಿನ ಲೆಕ್ಕ ಅಧೀಕ್ಷಕರು, ಪಂ.ರಾ.ಇಂ ವಿಭಾಗ, ಕೊಪ್ಪಳ.
2. ಬಿ.ಎನ್.ಮಾದಿನೂರು, ಅಂದಿನ ಲೆಕ್ಕಾಧೀಕ್ಷಕರು.ಜಿಪಂಪಿ ಕೊಪ್ಪಳ.
3. ಶ್ರೀ ದೇವೇಂದ್ರಪ್ಪ ದೇಸಾಯಿ, ಆಗಿನ ಲೆಕ್ಕ ಅಧೀಕ್ಷಕರು, ಪಂ.ರಾ.ಇಂ ವಿಭಾಗ, ಕೊಪ್ಪಳ.

---2

4. ಶ್ರೀ ಎಂ.ಪಂಪಾಪತಿ, ಆಗಿನ ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಕುಷ್ಟಗಿ.
5. ಶ್ರೀ ಬಿ.ವಿ.ಬಳಲೂದ, ಆಗಿನ ಉಗ್ರಾಣ ಪಾಲಕರು, ಪಂ.ರಾ.ಇಂ ವಿಭಾಗ, ಕೊಪ್ಪಳ.
6. ಶ್ರೀ ಈಶ್ವರ ಹತ್ತಿ, ಆಗಿನ ಉಗ್ರಾಣ ಪಾಲಕರು,
7. ಶ್ರೀ ಬಿ.ವಿ.ಹಿತ್ತಲಮನಿ, ಆಗಿನ ದ್ವಿ.ದ.ಸ.
8. ಶ್ರೀ ವಿ.ಜಿ.ಕೊಳ್ಳಪ್ಪನವರ್ ಆಗಿನ ದ್ವಿ.ದ.ಸ.
9. ಶ್ರೀ ತಿರುಮಲರಾವ್ ಆಗಿನ ದ್ವಿ.ದ.ಸ
10. ಶ್ರೀ ಎಂ.ಹೆಚ್.ಜಾಗೀರ್ ದಾರ್, ಆಗಿನ ಉಗ್ರಾಣ ಸಹಾಯಕ
11. ಶ್ರೀ ಮಾರ್ಟಿನ್, ಆಗಿನ ಉಗ್ರಾಣ ಸಹಾಯಕರು.
12. ಶ್ರೀ ವಲಿಬಾ ಆಗಿನ ಉಗ್ರಾಣಾ ಸಹಾಯಕರು,

ಈ ಮಧ್ಯೆ ಶ್ರೀ ಬಿ.ವೈ.ಮಾದಿನೂರು ಅಂದಿನ ಲೆಕ್ಕಾಧೀಕ್ಷಕರ ಇವರು ತಮ್ಮ ವಿರುದ್ಧದ ಆರೋಪಗಳ ಬಗ್ಗೆ ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿದ್ದನ್ನು ಪರಿಶೀಲಿಸಿ, ಸದರಿಯವರು ಉಗ್ರಾಣ ಸಾಮಗ್ರಿಗಳ ಕೊರತೆಗೆ ನೇರವಾಗಿ ಕಾರಣರಾಗಿಲ್ಲದಿರುವುದು ಕಂಡು ಬಂದಿದ್ದರಿಂದ ಸದರಿಯವರಿಗೆ ಸೀಮಿತಗೊಂಡಂತೆ ವಿಚಾರಣೆಗೆ ಆದೇಶಿಸಿದನ್ನು ಹಿಂಪಡೆದು ಮೇಲೆ ಓದಲಾದ ಕ್ರಮಾಂಕ (3)ರ ದಿನಾಂಕ:18.4.2006ರ ಆದೇಶದಲ್ಲಿ ಅವರ ಮೇಲಿನ ಆರೋಪಗಳಿಂದ ಕೈಬಿಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (4) ರಲ್ಲಿ ವಿಚಾರಣಾಧಿಕಾರಿಯವರು ಉಳಿದ 11 ಅಧಿಕಾರಿ/ನೌಕರರ ವಿರುದ್ಧ ಜಂಟಿ ಇಲಾಖೆ ವಿಚಾರಣೆ ಜರುಗಿಸಿ, ಸಲ್ಲಿಸಿದ್ದ ವರದಿಯಲ್ಲಿ ಅಧಿಕಾರಿ/ ನೌಕರರ ವಿರುದ್ಧ ಮಾಡಿರುವ ಆರೋಪಗಳು ರುಜುವಾತಾಗಿರುವುದಿಲ್ಲವೆಂದು ಅಭಿಪ್ರಾಯಿಸಿ, ವರದಿ ಸಲ್ಲಿಸಿದ್ದರು. ಈ ಪ್ರಕರಣದಲ್ಲಿ ವಿಚಾರಣೆಯನ್ನು ಆಡಿಟ್ ವರದಿಯ ಮೇಲೆ ಪ್ರಾರಂಭಿಸಲಾಗಿದ್ದು, ವಿಚಾರಣಾಧಿಕಾರಿಗಳು ಆಡಿಟ್ ವರದಿ/ದಾಖಲೆಗಳನ್ನು ಪರಿಶೀಲಿಸದೆ ಸಲ್ಲಿಸಿರುವ ವರದಿಯನ್ನು ಸರ್ಕಾರವು ಒಪ್ಪದೆ ಮರು ವಿಚಾರಣೆ ಜರುಗಿಸಿ, ವರದಿ ಸಲ್ಲಿಸುವಂತೆ ವಿಚಾರಣಾಧಿಕಾರಿಗಳಿಗೆ ತಿಳಿಸಿ, ಮೇಲೆ ಓದಲಾದ ಕ್ರಮಾಂಕ(5)ರ ಪತ್ರದೊಂದಿಗೆ. ವಿಚಾರಣೆ ವರದಿಯನ್ನು ಹಿಂದಿರುಗಿಸಲಾಗಿತ್ತು.

ವಿಚಾರಣಾಧಿಕಾರಿಗಳು ಈ ಪ್ರಕರಣದಲ್ಲಿ ಮರು ವಿಚಾರಣೆ ನಡೆಸಿ, ಮೇಲೆ ಕ್ರಮಾಂಕ(6) ರಲ್ಲಿ ಸಲ್ಲಿಸಿದ್ದ ವರದಿಯಲ್ಲಿ ಹಿಂದೆ ತೆಗೆದುಕೊಂಡ ತೀರ್ಮಾನಕ್ಕೆ ವ್ಯತಿರಿಕ್ತವಾದ ತೀರ್ಮಾನ ತೆಗೆದುಕೊಳ್ಳಲು ಬಲವಾದ ಕಾರಣಗಳು ಇರುವುದಿಲ್ಲವೆಂದು ಆಬಿಪ್ರಾಯಿಸಿ, ಆರೋಪಿತರ ವಿರುದ್ಧ ಹೊರಿಸಿರುವ ಯಾವುದೇ ಆರೋಪಗಳು ಸಾಭೀತಾಗಿರುವುದಿಲ್ಲವೆಂದು ಮತ್ತೊಮ್ಮೆ ವರದಿ ಸಲ್ಲಿಸಿದ್ದರು.

ಕೊಪ್ಪಳ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮತ್ತು ಉಪವಿಭಾಗಗಳಲ್ಲಿ ಉಗ್ರಾಣ ಕೊರತೆಯಿಂದ ಸರ್ಕಾರಕ್ಕೆ ರೂ.66.29,774/- ಗಳ ಬೃಹತ್ ಪ್ರಮಾಣದ ಆರ್ಥಿಕ ನಷ್ಟ ಉಂಟಾಗಿರುವುದು ಆಡಿಟ್ ವರದಿಯಿಂದ ಕಂಡು ಬರುತ್ತಿದ್ದರಿಂದ ವಿಚಾರಣಾ ವರದಿಯನ್ನು ಒಪ್ಪದೆ ಈ ಪ್ರಕರಣವನ್ನು ಸಮಗ್ರವಾಗಿ ಪರಿಶೀಲಿಸಿ, ಯಾವ ಯಾವ ಅಧಿಕಾರಿ/ನೌಕರರು ಎಷ್ಟೆಷ್ಟು ಮೊತ್ತವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ ಎಂಬ ಬಗ್ಗೆ ಅಧೀಕ್ಷಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಬಳ್ಳಾರಿ ಇವರಿಂದ ಸಮಗ್ರವಾಗಿ ಪರಿಶೀಲಿಸಿ, ಮೇಲೆ ಓದಲಾದ ಕ್ರಮಾಂಕ (8) ರ ಪತ್ರದಲ್ಲಿ ವರದಿಯನ್ನು ಪಡೆಯಲಾಗಿತ್ತು. ಕೊಪ್ಪಳ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮತ್ತು ನಾಲ್ಕು ಉಪವಿಭಾಗಗಳಲ್ಲಿ ಉಗ್ರಾಣ ಸಾಮಗ್ರಿಗಳ ಕೊರತೆಯಿಂದ ಸರ್ಕಾರಕ್ಕೆ ರೂ.36,73,699/- ಗಳ ಆರ್ಥಿಕ ನಷ್ಟ ಉಂಟಾಗಿರುತ್ತದೆ ಎಂದು ತಿಳಿಸಿದ್ದರಾದರೂ ಅದೇ ವರದಿಯಲ್ಲಿ 12 ಅಧಿಕಾರಿಗಳು ಪ್ರತ್ಯೇಕವಾಗಿ ದುರುಪಯೋಗಪಡಿಸಿಕೊಂಡಿರುವ ಮೊತ್ತ ರೂ.80,70,219/- ಗಳಾಗಿರುತ್ತದೆ ಎಂದು ತಿಳಿಸಿದ್ದರು.

--3

ಈ ಮಧ್ಯೆ, ಆರೋಪಿತರಲ್ಲಿ ಒಬ್ಬರಾದ ಶ್ರೀ ಪಂಪಾಪತಿ, ಸ.ಕಾ.ಇಂ ರವರು ವಿಚಾರಣಾ ವರದಿಯ ಮೇಲೆ ಜರೂರಾಗಿ ಕ್ರಮ ಕೈಗೊಳ್ಳವಂತೆ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ಮಾನ್ಯ ಕೆ.ಎ.ಟಿ ಅರ್ಜಿ ಸಂಖ್ಯೆ:3372/11 ನ್ನು ದಾಖಲಿಸಿದ್ದು, ಮಾನ್ಯ ನ್ಯಾಯಮಂಡಳಿಯು ದಿನಾಂಕ:22.6.2011 ರ ಆದೇಶದಲ್ಲಿ ಮೂರು ತಿಂಗಳ ಒಳಗೆ ವಿಚಾರಣಾ ವರದಿಯ ಮೇಲೆ ಅಂತಿಮ ಆದೇಶ ಹೊರಡಿಸತಕ್ಕದೆಂದು ನಿರ್ದೇಶನ ನೀಡಿತ್ತು. ಮು.ಕಾ.ಅ, ಜಿಪಂ, ಕೊಪ್ಪಳರವರು ದಿನಾಂಕ:31.1.2012 ರ ಪತ್ರದಲ್ಲಿ ಸರ್ಕಾರಕ್ಕೆ ವರದಿ ಮಾಡುತ್ತಾ, ಶ್ರೀ ತಿರುಮಲರಾವ್, ದ್ವಿ.ದ.ಸ ಮತ್ತು ಶ್ರೀ ಪಂಪಾಪತಿ ಇವರುಗಳ ವಿರುದ್ಧದ ಆರೋಪಗಳು ಒಂದೇಯಾಗಿದ್ದು ಸದರಿಯವರುಗಳು ಜಂಟಿಯಾಗಿ ಸರ್ಕಾರಕ್ಕೆ ರೂ.2,13,725 ಗಳನ್ನು ಭರಣ ಮಾಡಿರುವುದರಿಂದ ಸದರಿಯವರಗಳ ವಿರುದ್ಧದ ಆರೋಪಗಳಿಂದ ಕೈ ಬಿಡಬಹುದಾಗಿದೆಯೆಂದು ತಿಳಿಸಿದ್ದನ್ನು ಅನುಸರಿಸಿ ಕ್ರಮವಾಗಿ ಶ್ರೀ ಪಂಪಾಪತಿ, ಸ.ಕಾ.ಇಂ ಶ್ರೀ ತಿರುಮಲರಾವ್, ದ್ವಿ.ದ.ಸ ಇವರುಗಳನ್ನು ಮೇಲೆ ಓದಲಾದ ಕ್ರಮಾಂಕ (10) ರ ಆದೇಶಗಳಲ್ಲಿ ದೋಷಮುಕ್ತಗೊಳಿಸಲಾಗಿರುತ್ತದೆ.

ಈ ಮಧ್ಯೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ ರವರು ದಿನಾಂಕ:21.2.2013 ರ ಪತ್ರದೊಂದಿಗೆ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೊಪ್ಪಳ ಇವರಿಂದ ಪಡೆದ ವರದಿಯನ್ನು ಲಗತ್ತಿಸಿ, ಸರ್ಕಾರಕ್ಕೆ ಸಲ್ಲಿಸಿದ್ದರು, ಕಾರ್ಯಪಾಲಕ ಇಂಜಿನಿಯರ್ ವರದಿಯಲ್ಲಿ ಅಧೀಕ್ಷಕ ಇಂಜಿನಿಯರ್ ರವರ ವರದಿಯಲ್ಲಿ ತಿಳಿಸಿದಂತೆ ರೂ, 36,73,699/- ಗಳಿಗೆ ಒಟ್ಟು 19 ಅಧಿಕಾರಿ/ನೌಕರರಿಂದ ಹೊಣೆಗಾರರಾಗಿರುತ್ತಾರೆಂದು ತಿಳಿಸಿದ್ದರು. ಇದರಲ್ಲಿ ಶಿಸ್ತುಕ್ರಮ ಕೈಗೊಳ್ಳದ 5 ಅಧಿಕಾರಿ/ನೌಕರರನ್ನು ಹೆಸರಿಸಿದ್ದರು.

ಒಟ್ಟಾರೆ ಪ್ರಕರಣದಲ್ಲಿ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ ವಿಭಾಗ, ಕೊಪ್ಪಳ, ಮು.ಕಾ.ಅ, ಜಿಪಂ ಕೊಪ್ಪಳ ಮತ್ತು ಅಧೀಕ್ಷಕ ಇಂಜಿನಿಯರ್ ಇವರ ವರದಿ ಇವುಗಳನ್ನು ಅವಲೋಕಿಸಲಾಗಿ, ಪ್ರತಿಯೊಬ್ಬ ಆರೋಪಿತರಿಂದ ತಲಾ ಎಷ್ಟು ಮೊತ್ತ ನಷ್ಟ ಉಂಟಾಗಿದೆಯೆಂದು ಸ್ಪಷ್ಟವಾಗಿ ವರದಿ ಲಭ್ಯವಾಗದಿದ್ದಾಗ್ಯೂ ಸಹ ಸರ್ಕಾರವು ಅಧೀಕ್ಷಕ ಇಂಜಿನಿಯರ್ ರವರು ನೀಡಿದ್ದ ತಾಂತ್ರಿಕ ವರದಿಯನ್ನು ಪರಿಗಣಿಸಿ, ಈ ಕೆಳಕಂಡ 9 ಅಧಿಕಾರಿ/ನೌಕರರಿಗೆ ಎರಡನೇ ಕಾರಣ ಕೇಳುವ ನೋಟಿಸ್ ಜಾರಿ ಮಾಡಲಾಗಿತ್ತು.:-

| ಕ್ರ.ಸಂ. | ಹೆಸರು | ಅಧೀಕ್ಷಕ ಇಂಜಿನಿಯರ್ ರವರ ತಾಂತ್ರಿಕ ವರದಿಯನುಸಾರ ಸದರಿ ನೌಕರರಿಂದ ಉಂಟಾದ ನಷ್ಟದ ಮೊತ್ತ |
|---|---|---|
| 1 | ಶ್ರೀ ಕೆ.ಎನ್.ಚಂದ್ರಶೇಖರ್, ಲೆಕ್ಕಾಧೀಕ್ಷಕರು | ರೂ.1,76,773/- |
| 2 | ಶ್ರೀ ವಲೀಬಾ, ಹಿಂದಿನ ಉಗ್ರಾಣ ಸಹಾಯಕ | ನಷ್ಟದ ಮೊತ್ತ ಪ್ರಸ್ತಾಪಿಸಿಲ್ಲ. |
| 3 | ಶ್ರೀ ಮಾರ್ಟೀನಾ, ಹಿಂದಿನ ಉಗ್ರಾಣ ಸಹಾಯಕ | ನಷ್ಟದ ಮೊತ್ತ ಪ್ರಸ್ತಾಪಿಸಿಲ್ಲ. |
| 4 | ಶ್ರೀ ಎಂ.ಹೆಚ್.ಜಗೀರ್‌ದಾರ್ ಉಗ್ರಾಣ ಸಹಾಯಕ | ನಷ್ಟದ ಮೊತ್ತ ಪ್ರಸ್ತಾಪಿಸಿಲ್ಲ. |

| | | |
|---|---|---|
| 5 | ಶ್ರೀ ವಿ.ಜೆ.ಕೊಳ್ಳಪನವರ<br>ಹಿಂದಿನ ದ್ವಿ.ದ.ಸ | ರೂ.4,39,067/- |
| 6 | ಶ್ರೀ ಬಿ.ವಿ.ಹಿತ್ತಲಮನಿ, ದ್ವಿ.ದ.ಸ | 1,27,556/- |
| 7 | ಈಶ್ವರ ಹತ್ತಿ, ಹಿಂದಿನ ಉಗ್ರಾಣ ಪಾಲಕರು | 6,38,993/- |
| 8 | ಶ್ರೀ ಬಿ.ವಿ.ಬಳಲೂದ<br>ಹಿಂದಿನ ಉಗ್ರಾಣ ಸಹಾಯಕ | 29,39,723/- |
| 9 | ಶ್ರೀ ದೇವೇಂದ್ರಪ್ಪ ದೇಸಾಯಿ<br>ಪ್ರಭಾರಿ ಲೆಕ್ಕಾಧೀಕ್ಷಕರು | 4,33,346/- |
| | **ಒಟ್ಟು** | **47,55, 458/-** |

9 ಅಧಿಕಾರಿ ನೌಕರರ ಪೈಕಿ ಕ್ರಮ ಸಂಖ್ಯೆ(2), (3), (4), (6) ಮತ್ತು (9) ರಲ್ಲಿರುವ ಅಧಿಕಾರಿ ನೌಕರರು ತಮ್ಮ ವಿರುದ್ದದ ಆರೋಪಗಳನ್ನು ನಿರಾಕರಿಸಿ, ತಮ್ಮನ್ನು ಆರೋಪ ಮುಕ್ತಗೊಳಿಸುವಂತೆ ಕೋರಿದ್ದರು, ಉಳಿದ ನಾಲ್ವರು ಆರೋಪಿತರು ಯಾವುದೇ ವಿವರಣೆಯನ್ನು ಸಲ್ಲಿಸಿರುವುದಿಲ್ಲ.

ಸರ್ಕಾರವು, ವಿಚಾರಣಾಧಿಕಾರಿಗಳ ವರದಿ, ಆರೋಪಿತರ ವಿವರಣೆಗಳು, ಅಧೀಕ್ಷಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಬಳ್ಳಾರಿ ಇವರ ವರದಿಯನ್ನು ಪರಿಶೀಲಿಸಿರುತ್ತದೆ. ಶ್ರೀ ದೇವೇಂದ್ರಪ್ಪ ದೇಸಾಯಿ, ಪ್ರಥಮ ದರ್ಜೆ ಲೆಕ್ಕ ಸಹಾಯಕ ಇವರು ಶ್ರೀ ಬಿ.ವೈ.ಮಾದಿನೂರು ಅಂದಿನ ಲೆಕ್ಕಾಧೀಕ್ಷಕರು ವರ್ಗಾವಣೆಯಿಂದ ತೆರವಾದ ಹುದ್ದೆಗೆ ಪ್ರಭಾರ ವಹಿಸಿಕೊಂಡಿದ್ದು, ಈ ರೀತಿ ಪ್ರಭಾರ ವಹಿಸಿಕೊಂಡ ಸಂದರ್ಭದಲ್ಲಿ ತಮಗೆ ಯಾವುದೇ ದಾಖಲೆಗಳನ್ನು ಹಸ್ತಾಂತರಿಸಿಲ್ಲದ ಕಾರಣ ಸದರಿ ಆರ್ಥಿಕ ನಷ್ಟಕ್ಕೆ ಶ್ರೀ ಬಿ.ವೈ.ಮಾದಿನೂರು ಇವರೇ ಕಾರಣರಾಗಿದ್ದು, ತಾವು ಯಾವುದೇ ರೀತಿಯ ಅವ್ಯವಹಾರಕ್ಕೆ ಜವಾಬ್ದಾರರಾಗಿಲ್ಲವೆಂದು ತಿಳಿಸಿ, ಆರೋಪ ಮುಕ್ತಗೊಳಿಸಬೇಕೆಂದು ಕೋರಿದ್ದರು.

ಉಳಿದ ಆರೋಪಿತರು ಸಲ್ಲಿಸಿದ್ದ ವಿವರಣೆಯನ್ನು ಪರಿಶೀಲಿಸಿ, ಹಾಗೂ ವಿವರಣೆ ಸಲ್ಲಿಸದೇ ಇರುವ ಅಧಿಕಾರಿಗಳ ಹೇಳಿಕೆ ಏನು ಇರುವುದಿಲ್ಲವೆಂದು ಪರಿಗಣಿಸಿ, (1) ಶ್ರೀ ಈಶ್ವರ ಹತ್ತಿ, ಆಗಿನ ಉಗ್ರಾಣ ಪಾಲಕರು, (2) ಶ್ರೀ ಮಾರ್ಟಿನ್, ಆಗಿನ ಉಗ್ರಾಣ ಸಹಾಯಕರು. ಮತ್ತು ವಲಿಬಾ ಆಗಿನ ಉಗ್ರಾಣ ಸಹಾಯಕರು ಅಧಿಕಾರಿ/ನೌಕರರ ವಿರುದ್ಧ ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ಮೇಲೆ ಓದಲಾದ ಕ್ರಮಾಂಕ (11) ರ ದಿ:5.10.2015 ರ ಆದೇಶದಲ್ಲಿ ದಂಡನೆ ವಿಧಿಸಲಾಗಿದೆ. ಅದೇ ಆದೇಶದಲ್ಲಿ ಶ್ರೀ ಎಂ.ಹೆಚ್.ಜಾಗೀರ್‌ದಾರ್ ಇವರನ್ನು ಆರೋಪ ಮುಕ್ತಗೊಳಿಸಿದ್ದು, ಶ್ರೀ ದೇವೇಂದ್ರಪ್ಪ ದೇಸಾಯಿ ಇವರ ಪ್ರಕರಣವನ್ನು ಪ್ರತ್ಯೇಕವಾಗಿ ಪರಿಶೀಲಿಸಲು ತಿಳಿಸಲಾಗಿದೆ.

ಶ್ರೀ ದೇವೇಂದ್ರಪ್ಪ ದೇಸಾಯಿ, ಹಿಂದಿನ ಪ್ರಭಾರಿ ಲೆಕ್ಕಾಧೀಕ್ಷಕರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೊಪ್ಪಳ ಇವರು ಸಲ್ಲಿಸಿದ ಮನವಿಯನ್ನು ಮೇಲೆ ಓದಲಾದ ಕ್ರಮಾಂಕ (12) ರ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ ಇವರಿಗೆ ಕಳುಹಿಸಿ, ಮಂಡನಾಧಿಕಾರಿಯವರ ವರದಿಯನ್ನು ಪರಿಶೀಲಿಸಿ, ಅಧೀಕ್ಷಕ ಇಂಜಿನಿಯರ್ ಇವರು ತಿಳಿಸಿರುವಂತೆ ಶ್ರೀದೇವೇಂದ್ರಪ್ಪ ದೇಸಾಯಿ ಇವರು ರೂ.4,33,346/- ಗಳ ಮೊತ್ತದ ಉಗ್ರಾಣ ಕೊರತೆಗೆ

---5

ಕಾರಣರಾಗಿರುತ್ತಾರೆಯೇ ಎಂಬ ಅಂಶಗಳ ಬಗ್ಗೆ ಸಮಗ್ರವಾಗಿ ಪರಿಶೀಲಿಸಿ, ಸ್ಪಷ್ಟ ಅಭಿಪ್ರಾಯವನ್ನು ನೀಡುವಂತೆ ಕೋರಲಾಗಿತ್ತು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಕೊಪ್ಪಳ ರವರು ಮೇಲೆ ಓದಲಾದ ಕ್ರಮಾಂಕ (13) ರ ಪತ್ರದೊಂದಿಗೆ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೊಪ್ಪಳ ಇವರಿಂದ ವರದಿಯನ್ನು ಪಡೆದು ಲಗತ್ತಿಸಿ, ಕಳುಹಿಸಿದ್ದರು. ಕಾರ್ಯಪಾಲಕ ಇಂಜಿನಿಯರ್ ರವರ ವರದಿಯನ್ನು ಪರಿಶೀಲಿಸಲಾಗಿ, ಅಧೀಕ್ಷಕ ಇಂಜಿನಿಯರ್, ಪಂ.ರಾ.ಇಂ ವೃತ್ತ, ಬಳ್ಳಾರಿ ಇವರ ತಾಂತ್ರಿಕ ಪರಿಶೀಲನಾ ವರದಿಯನ್ವಯ ಶ್ರೀ ದೇವೇಂದ್ರಪ್ಪ ದೇಸಾಯಿ, ಪ್ರ.ದ.ಲೆ.ಸ.ರವರು ಯಾವುದೇ ಉಗ್ರಾಣ ಕೊರತೆಯ ಬಗ್ಗೆ ಹೊಣೆಗಾರರಾಗಿರುವುದಿಲ್ಲವೆಂದು ತಿಳಿದು ಬರುತ್ತದೆ ಎಂದು ತಿಳಿಸಿರುತ್ತಾರೆ.

ಸರ್ಕಾರವು ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೊಪ್ಪಳ ಇವರ ವರದಿ, ಶ್ರೀ ದೇವೇಂದ್ರಪ್ಪ ದೇಸಾಯಿ ಇವರ ಮನವಿ ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಿರುತ್ತದೆ. ಶ್ರೀ ದೇವೇಂದ್ರಪ್ಪ ದೇಸಾಯಿ, ಹಿಂದಿನ ಪ್ರಭಾರಿ, ಲೆಕ್ಕಾಧೀಕ್ಷಕರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೊಪ್ಪಳ ಇವರನ್ನು ಆರೋಪಗಳಿಂದ ಕೈ ಬಿಡಲು ತೀರ್ಮಾನಿಸಿರುತ್ತದೆ. ಆದ್ದರಿಂದ ಈ ಆದೇಶ..

**<u>ಆದೇಶ ಸಂಖ್ಯೆ:ಗ್ರಾಅಪ 38 ಇಎನ್‌ಕ್ಯೂ 2004,</u> ಬೆಂಗಳೂರು ದಿನಾಂಕ:21.4.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಸರ್ಕಾರವು ಶ್ರೀ ದೇವೇಂದ್ರಪ್ಪ ದೇಸಾಯಿ, ಹಿಂದಿನ ಪ್ರಭಾರಿ ಲೆಕ್ಕಾಧೀಕ್ಷಕರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೊಪ್ಪಳ ಇವರ ವಿರುದ್ಧ ಮೇಲೆ ಓದಲಾದ ಕ್ರಮಾಂಕ (1) ರ ದಿನಾಂಕ:28.10.2005 ರ ದೋಷಾರೋಪಣಾ ಪಟ್ಟಿಯಲ್ಲಿ ಮಾಡಲಾದ ಆರೋಪಗಳಿಂದ ಕೈ ಬಿಟ್ಟು ಆದೇಶಿಸಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

21/04/2017
(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

<u>ಇವರಿಗೆ:</u>

1. ಮಹಾಲೇಖಪಾಲರು,(ಎ ಮತ್ತು ಇ.) ಬೆಂಗಳೂರು.
2. ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ,
3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
4. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು(ದಕ್ಷಿಣ) ಕೆ.ಆರ್.ಸರ್ಕಲ್ ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ

6. ಅಧೀಕ್ಷಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಬಳ್ಳಾರಿ.
7. ಸಂಬಂಧಿಸಿದ ನೌಕರರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ ಇವರ ಮುಖಾಂತರ)
8. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ (ಸೇವೆಗಳು-ಎ ಮತ್ತು ಸೇವೆಗಳು-ಸಿ)
9. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು
10. ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು
11. ಶಾಖಾ ರಕ್ಷಾ ಕಡತ, ಹೆಚ್ಚುವರಿ ಪ್ರತಿ, ಕಂಪ್ಯೂಟರ್ ಸೆಲ್